**RPAD**

## ಕರ್ನಾಟಕ ಸರ್ಕಾರ

ಸಂ: ಸಿಆಸುಇ 113 ಸಿಸೇನಿ 2017

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 26.07.2018

### ಅಧಿಕೃತ ಜ್ಞಾಪನ

**ವಿಷಯ:** ದಿವಂಗತ ಸಿದ್ದಲಿಂಗಯ್ಯ, ಹಿಂದಿನ ಜಮೇದಾರ್, ಕರ್ನಾಟಕ ಸರ್ಕಾರ ಸಚಿವಾಲಯ, ಇವರ ಮಗ ಶ್ರೀ ಹೆಚ್.ಎಸ್.ಶಿವಕುಮಾರ್ ಇವರಿಗೆ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಗ್ರೂಪ್-ಡಿ ವೃಂದದ ದಲಾಯತ್ ಹುದ್ದೆಗೆ ಅನುಕಂಪ ಆಧಾರದ ಮೇಲೆ ನೇಮಕಾತಿ ನೀಡುವ ಬಗ್ಗೆ

**ಉಲ್ಲೇಖ:** ಶ್ರೀ ಹೆಚ್.ಎಸ್.ಶಿವಕುಮಾರ್ ಬಿನ್ ದಿವಂಗತ ಸಿದ್ದಲಿಂಗಯ್ಯ, ಇವರ ಮನವಿ ದಿನಾಂಕ: 17.03.2017

*****

ಶ್ರೀ ಸಿದ್ದಲಿಂಗಯ್ಯ, ಜಮೇದಾರ್, ಕರ್ನಾಟಕ ಸರ್ಕಾರ ಸಚಿವಾಲಯ, ಇವರು ಸೇವೆಯಲ್ಲಿರುವಾಗಲೇ ದಿನಾಂಕ: 16.02.2017ರಂದು ಮೃತಪಟ್ಟಿರುವ ಹಿನ್ನಲೆಯಲ್ಲಿ, ಅವರ ಮಗ ಶ್ರೀ ಹೆಚ್.ಎಸ್.ಶಿವಕುಮಾರ್ ಇವರು ತಮ್ಮನ್ನು ಅನುಕಂಪದ ಆಧಾರದ ಮೇಲೆ ನೇಮಕಾತಿ ಮಾಡುವಂತೆ ಉಲ್ಲೇಖಿತ ಮನವಿಯಲ್ಲಿ ಕೋರಿರುತ್ತಾರೆ. ಸದರಿ ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ, ಮೃತ ನೌಕರರ ಮಗನಾದ ಶ್ರೀ ಹೆಚ್.ಎಸ್.ಶಿವಕುಮಾರ್ ಇವರನ್ನು ಕರ್ನಾಟಕ ನಾಗರಿಕ ಸೇವಾ (ಅನುಕಂಪದ ಆಧಾರದ ಮೇಲೆ ನೇಮಕಾತಿ) ನಿಯಮಗಳು, 1996ರ ನಿಯಮ 3(2)(i)(ಬಿ)ರ ಪ್ರಕಾರ ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿನ ಗ್ರೂಪ್-ಡಿ ವೃಂದದ ದಲಾಯತ್ ಹುದ್ದೆಗೆ, ವೇತನ ಶ್ರೇಣಿ ರೂ.17000-400-18600-450-20400-500-22400-550-24600-600-27000-650-28950ರಲ್ಲಿ ಎರಡು ವರ್ಷಗಳ ಪರೀಕ್ಷಾರ್ಥ ಸೇವಾವಧಿ ಮೇಲೆ ಕೆಳಕಂಡ ಸಾಮಾನ್ಯ ಷರತ್ತುಗಳಿಗೆ ಒಳಪಟ್ಟು ನೇಮಕಾತಿ ಮಾಡಲಾಗಿದೆ:

1. ಸದರಿ ಅಭ್ಯರ್ಥಿಯು ಸೇವೆಗೆ ಹಾಜರಾದ ದಿನಾಂಕದಿಂದ 2(ಎರಡು) ವರ್ಷ ಖಾಯಂಪೂರ್ವ ಪರೀಕ್ಷಾರ್ಥ (ಪ್ರೊಬೇಷನ್) ಅವಧಿಯಲ್ಲಿ ಇರತಕ್ಕದ್ದು.

2. ಅಭ್ಯರ್ಥಿಯು ದೈಹಿಕ ದೃಢತೆಯ ಬಗ್ಗೆ ಜಿಲ್ಲಾ ಶಸ್ತ್ರ ಚಿಕಿತ್ಸಕರ ದರ್ಜೆಗಿಂತ ಕಡಿಮೆ ಇಲ್ಲದ ಸರ್ಕಾರಿ ವೈದ್ಯಾಧಿಕಾರಿಗಳಿಂದ ದೃಢೀಕರಣ ಪತ್ರವನ್ನು ಹಾಗೂ ಅವರು ವಾಸ ಮಾಡುತ್ತಿರುವ ಕ್ಷೇತ್ರದ, ಸಂಬಂಧಿಕರಲ್ಲದ, ಕನಿಷ್ಠ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನು ಕರ್ತವ್ಯಕ್ಕೆ ಹಾಜರಾಗುವ ಸಂದರ್ಭದಲ್ಲಿ ಹಾಜರುಪಡಿಸತಕ್ಕದ್ದು.

3 ಅಭ್ಯರ್ಥಿಯು ಭಾರತದ ಒಕ್ಕೂಟದನ್ವಯ ನಿಷ್ಠಾ ಪ್ರಮಾಣ ವಚನ ಸ್ವೀಕರಿಸತಕ್ಕದಾಗಿರುತ್ತದೆ.

4. ಅಭ್ಯರ್ಥಿಯ ನೇಮಕಾತಿಯು, ನೇಮಕಾತಿ ಮತ್ತು ಸೇವಾಷರತ್ತುಗಳಿಗೆ ಹಾಗೂ ಆಗಿಂದಾಗ್ಗೆ ಜಾರಿಯಲ್ಲಿರುವ ನಿಯಮ/ಆದೇಶಗಳಿಗೆ ಮತ್ತು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005, ದಿ:31.03.2006ರನ್ವಯ ಮತ್ತು ಆಗಿಂದಾಗ್ಗೆ ಹೊರಡಿಸಿರುವ ಸರ್ಕಾರದ ಆದೇಶಗಳ ಅನ್ವಯ ನಿಗದಿತ ವಂತಿಗೆ ಪಿಂಚಣಿ ಯೋಜನೆಗೆ ಒಳಪಟ್ಟಿರುತ್ತದೆ.

...2...

5. ಅಭ್ಯರ್ಥಿಯು ದಲಾಯತ್ ಹುದ್ದೆಗೆ ಸಂಬಂಧಪಟ್ಟ ಯಾವ ಕೆಲಸವನ್ನು ವಹಿಸಿದರೂ ಅದನ್ನು ನಿರ್ವಹಿಸತಕ್ಕದ್ದು.

6. ಅಭ್ಯರ್ಥಿಯು ನೀಡಿರುವ ಅರ್ಜಿ ಹಾಗೂ ದಾಖಲೆಗಳಲ್ಲಿನ ಯಾವುದೇ ಅಂಶವು ಮುಂದೆ ಎಂದಾದರೂ ತಪ್ಪು/ಸುಳ್ಳು ಎಂದು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೆ ತಕ್ಷಣದಿಂದಲೇ ಅವರನ್ನು ಸೇವೆಯಿಂದ ತೆಗೆದುಹಾಕಲಾಗುವುದು.

7. ಅಭ್ಯರ್ಥಿಯು ಕರ್ತವ್ಯಕ್ಕೆ ಹಾಜರಾಗಲು ಬರುವಾಗ ಯಾವುದೇ ಪ್ರಯಾಣ ಭತ್ಯೆಯನ್ನು ಪಡೆಯಲು ಅರ್ಹರಿರುವುದಿಲ್ಲ.

8. ಅಭ್ಯರ್ಥಿಯು ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ-3), ಕೊಠಡಿ ಸಂ.454, 4ನೇ ಮಹಡಿ, 3ನೇ ಗೇಟ್, ಬಹುಮಹಡಿಗಳ ಕಟ್ಟಡ, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-560001 ಇವರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

9. ಅಭ್ಯರ್ಥಿಯು ಈ ಅಧಿಕೃತ ಜ್ಞಾಪನವನ್ನು ಅವರು ನೀಡಿರುವ ವಿಳಾಸಕ್ಕೆ ನೋಂದಾಯಿತ ಅಂಚೆ ಮೂಲಕ ಕಳುಹಿಸಲಾದ ದಿನಾಂಕದಿಂದ 15 (ಹದಿನೈದು) ದಿನಗಳ ಒಳಗೆ ಕರ್ತವ್ಯಕ್ಕೆ ಹಾಜರಾಗತಕ್ಕದ್ದು.

26.7.18

(ಎಂ.ವೆಂಕಟರಸಪ್ಪ)
ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ನೇಮಕಾತಿ ಪ್ರಾಧಿಕಾರಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಆಡಳಿತ)

**ಇವರಿಗೆ:**

ಶ್ರೀ ಹೆಚ್.ಎಸ್.ಶಿವಕುಮಾರ್ } ಮಗ
ಬಿನ್ ದಿವಂಗತ ಸಿದ್ದಲಿಂಗಯ್ಯ,
ನಂ.169, 2ನೇ 'ಎ' ಅಡ್ಡ ರಸ್ತೆ,
3ನೇ ಮುಖ್ಯ ರಸ್ತೆ (ಶಾಂತಿಧಾಮ ಕಾಲೇಜು ರಸ್ತೆ),
ಭೈರವೇಶ್ವರ ನಗರ, ಸುಂಕದಕಟ್ಟೆ,
ಬೆಂಗಳೂರು ಉತ್ತರ ವಿಶ್ವನೀಡಂ,
ಬೆಂಗಳೂರು-560 091

**ನೋಂದಾಯಿತ ಅಂಚೆ, ಸ್ವೀಕೃತಿ ಬಾಕಿ ಮೂಲಕ**

**ಪ್ರತಿ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಸಿಆಸುಇ
3. ಸರ್ಕಾರದ ವಿಶೇಷ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಸಿಆಸುಇ
4. ಸರ್ಕಾರದ ಅಪರ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಸಿಆಸುಇ (ಸೇವಾ ನಿಯಮಗಳು)

5. ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಇ–ಆಡಳಿತ)
6. ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಸಿಬ್ಬಂದಿ)
7. ಸರ್ಕಾರದ ಉಪ ಕಾರ್ಯದರ್ಶಿ, ಸಿಆಸುಇ (ಆಡಳಿತ ಸುಧಾರಣೆ)
8. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ಲೆಕ್ಕಪತ್ರ–1)/(ಲೆಕ್ಕಪತ್ರ–2)/(ಲೆಕ್ಕಪತ್ರ–3)/(ಕಾರ್ಯಕಾರಿ–1)/(ಸಿಬ್ಬಂದಿ)/(ಆಡಳಿತ ಕೋಶ)
9. ಮುಖ್ಯ ಗ್ರಂಥಾಧಿಕಾರಿ, ಕರ್ನಾಟಕ ಸರ್ಕಾರ ಸಚಿವಾಲಯ ಗ್ರಂಥಾಲಯ, ವಿಧಾನಸೌಧ/ವಿಕಾಸಸೌಧ
10. ಸೇವಾಮಸ್ತಕ ಸಹಾಯಕರು, ಸಿಆಸುಇ (ಆಡಳಿತ–ಇ)/ಹೆಚ್‌ಆರ್‌ಎಂಎಸ್ ಸಹಾಯಕರು
11. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು